| O.S | 212/2018 |
|---|---|
| P.W. | 1 |

ದಿನಾಂಕ : 31-07-2021 ರಂದು ಪಾಟೀ ಸವಾಲಿಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ**

23. ದಾವಾ ಗ ಆಸ್ತಿಯ ಸ್ವಾಧೀನವನ್ನು ಪ್ರತಿವಾದಿಗೆ ಯಾರು ನೀಡಿದ್ದಾರೆ ಎಂದು ಹೇಳಬಹುದಾ ಎಂದರೆ ಪ್ರತಿವಾದಿ ಗ ಆಸ್ತಿಯ ಸ್ವಾಧೀನದಲ್ಲಿ ಇಲ್ಲ. ನಿಪಿ-5 ಮತ್ತು 6 ಛಾಯಚಿತ್ರಗಳಲ್ಲಿ ಕಟ್ಟಡವನ್ನು 1ನೇ ಪ್ರತಿವಾದಿ ಕಟ್ಟಿದ್ದಾರೆ. 1ನೇ ಪ್ರತಿವಾದಿ ಸದರಿ ಕಟ್ಟಡವನ್ನು ಕಾನೂನು ಬಾಹಿರವಾಗಿ ಕಟ್ಟಿದ್ದಾರೆ. ಈ ಕಟ್ಟಡದ ಬಗ್ಗೆ ನನಗೆ 2015 ರಲ್ಲಿ ತಿಳಿಯಿತು.

24. ದಾವಾ ಗ ಷೆಡ್ಯೂಲ್ ಆಸ್ತಿ ದಾವಾ ಕ ಆಸ್ತಿಯ ಒಂದು ಭಾಗ ಎಂದರೆ ಸರಿ. ಅಸಲು ದಾವಾ 213.2018 ರಲ್ಲಿನ 1ನೇ ಪ್ರತಿವಾದಿ ಹಾಗು ಉಳಿದ ಖರೀದಿದಾರರು ಖರೀದಿಸಿದ ಆಸ್ತಿ ದಾವಾ ಕ ಆಸ್ತಿಯಲ್ಲಿ ಒಳಗೊಂಡಿದೆ ಎಂದರೆ ಸರಿ. ದಾವಾ ಕ ಆಸ್ತಿಯಲ್ಲಿ ಹಕ್ಕು, ಸ್ವಾಧೀನ ವಾದಿಗಿಲ್ಲ ಎಂದರೆ ಸುಳ್ಳು. ದಾವಾ ಕ ಆಸ್ತಿಯಲ್ಲಿ ಮತ್ತೊಂದು ಚರ್ಚ್ ಕಟ್ಟಡ ಇದೆ ಎಂದರೆ ಸರಿ. ಸದರಿ ಚರ್ಚ್ ಯಾವಾಗ ನಿರ್ಮಾಣವಾಯಿತು ಎಂದು ನನಗೆ ನೆನಪಿಲ್ಲ.

25. 1ನೇ ಪ್ರತಿವಾದಿ ದಿನಾಂಕ 04-07-2005 ರಲ್ಲಿ ದಾವಾ ಗ ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ದಾವಾ ಕ ಸ್ವತ್ತನ್ನು ನಾನು ಮೊದಲಬಾರಿಗೆ ಅಂದಾಜು 1997-98 ರಲ್ಲಿ ನೋಡಿದ್ದೇನೆ. ದಾವಾ ಗ ಆಸ್ತಿಯಲ್ಲಿ ಕಟ್ಟಡ ನಿರ್ಮಾಣವಾಗ ಬೇಕಾದರೆ ನಾನು ಭೇಟಿ ನೀಡಿರಲಿಲ್ಲ. 1ನೇ ಪ್ರತಿವಾದಿ 2005 ರಲ್ಲಿ ಸ್ವಾಧೀನಾನುಭವದಲ್ಲಿದ್ದ ವಿಚಾರ ನನಗೆ ತಿಳಿದಿತ್ತು ಎಂದರೆ ಸುಳ್ಳು. ದಾವಾ ಗ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದಿರುವ ಕಾರಣ 1ನೇ ಪ್ರತಿವಾದಿ ಖರೀದಿಸಿದ ದಿನಾಂಕದಿಂದಲೇ ಇದನ್ನು ಪ್ರಶ್ನಿಸಿಲ್ಲ ಎಂದರೆ ಸುಳ್ಳು. ದಾವಾ ಕ ಆಸ್ತಿಗೆ ನಾವು ಯೊವುದೇ ತಂತಿಬೇಲಿ ಹಾಕಿಸಿಲ್ಲ ಎಂದರೆ ಸುಳ್ಳು. ನಾವು ಹಾಜರುಪಡಿಸಿದ ಛಾಯಚಿತ್ರದಲ್ಲಿ ಕಾಣುವ ತಂತಿಬೇಲಿ 1ನೇ ಪ್ರತಿವಾದಿ ಹಾಕಿಸಿದ್ದು ಎಂದರೆ ಸುಳ್ಳು. ಇಂದಿಗೂ ಸಹ 1ನೇ ಪ್ರತಿವಾದಿ ದಾವಾ ಗ ಷೆಡ್ಯೂಲ್‌ನ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ನಾನು ಎಂದೂ ಕ ದಾವಾಸ್ತಿಯನ್ನು ನೋಡಿಲ್ಲ ಎಂದರೆ ಸುಳ್ಳು. ನಾನು ಸಲ್ಲಿಸಿದ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ

(ಈ ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ